**( ದಿನಾಂಕ.14-02-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)**

**ಮುಂದುವರೆದ ಪಾಟೀ ಸವಾಲುಃ** ಶ್ರೀ BAD ವಕೀಲರಿಂದ,

1 ನೇ ಪ್ರತಿವಾದಿ ಈಗ 5 ನೇ ಪ್ರತಿವಾದಿ ಬಳಿ ಇರುತ್ತಾರೆ. 1 ಮತ್ತು 6 ನೇ ಪ್ರತಿವಾದಿ ಮಧ್ಯ ಯಾವುದೇಪಂಚಾಯಿತಿ ಮಾಡಿಲ್ಲ. ನಾನು ಪಂಚಾಯಿತಿ ಮಾಡದೇ ಇರುವ ಕಾರಣ ಅವರಿಬ್ಬರ ಮಧ್ಯ ಏನು ಪಂಚಾಯಿತಿ ಅಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಾನು 1 ನೇ ಪ್ರತಿವಾದಿಯನ್ನು ಇವತ್ತು ಕೂಡ ಮಾತನಾಡಿಸಿರುತ್ತೇನೆ. 1 ನೇ ಪ್ರತಿವಾದಿ 6 ನೇ ಪ್ರತಿವಾದಿಗೆ ಒಂದು ಮರಣ ಶಾಸನ ಪತ್ರ ಮಾಡಿಕೊಟ್ಟಿರುತ್ತಾರೆ ಎಂದು ನನಗೆ ಹೇಳಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾಮದೇವ ತನಗೆ ಸುಮಾರು 15 ವರ್ಷಗಳ ಹಿಂದೆ ಕಾಲಿನ ಮೂಳೆ ಮುರಿದಿತ್ತು. ಅವರು ಕಾಲು ಊರಿಲ್ಲೆ ಮುರಿದಿತ್ತು ನಾನು ಮುಂಬೈಗೆ ಹೋಗಿರಲಿಲ್ಲ. ಸದರಿ ನಾಮದೇವಗೆ ವೈದ್ಯಕಿಲೀಯ ಖರ್ಚಿನ ಸಲುವಾಗಿ 5 ನೇ ಪ್ರತಿವಾದಿ 2 ಲಕ್ಷ ರೂಪಾಯಿ ಖರ್ಚು ಮಾಡಿರುವ ಬಗ್ಗೆ ನಾನು ಯಾವುದೇ ರಸೀದಿಯನ್ನು ನೋಡಿರುವುದಿಲ್ಲ.

ನಾನು ಹೇಳುವ ಹಾಗೇ 5 ನೇ ಪ್ರತಿವಾದಿ ದವಾಖಾನೆ ಸಲುವಾಗಿ 2 ಲಕ್ಷ ರೂಪಾಯಿ ಖರ್ಚು ಮಾಡಿರುತ್ತಾಳೆ ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ನಾಮದೇವ 5 ನೇ ಪ್ರತಿವಾದಿಗೆ ಮನೆ ಬರೆದುಕೊಟ್ಟ ದಾಖಲೆಯನ್ನು ನಾನು ನೋಡಿಲ್ಲ ಅದರೆ ಬರೆದು ಕೊಟ್ಟಿರಬಹುದು. ಆದೇ ರೀತಿ ನಾಮದೇವ 5 ನೇ ಪ್ರತಿವಾದಿಗೆ ಮನೆಯನ್ನು ಜೀವಾನಂಶ ರೂಪಾವಾಗಿ ಕೋಟ್ಟಿರುತ್ತಾರೆ ಎಂದು ಹೇಳಿದ



ಸಂಗತಿ ಸುಳ್ಳು ಇದೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿ 1 ನೇ ಪ್ರತಿವಾದಿಗೆ ಮಗಳು ಆಗಬೇಕು. 1 ಮತ್ತು 4 ನೇ ಪ್ರತಿವಾದಿಗಳು ಸಿಕ್ಕಿದರವರ ಹತ್ತಿರ ಜಮೀನು ಖರೀದಿಸಿರುತ್ತಾರೆ. ಆ ರೀತಿ ಖರೀದಿಸಿ ಸುಮಾರು 30 ವರ್ಷ ಆಗಿರುತ್ತದೇ. ಆ ಬಗ್ಗೆ ನಾನು ಕಾಗದ ಪತ್ರಗಳನ್ನು ನೋಡಿಲ್ಲ. ಸದರಿ ಖರೀದಿಯ ಜಮೀನಿನ ಸರ್ವೇ

ನಂ ಎಕರೆ ಗುಂಟೆ ಹೇಳಲು ಬರುವುದಿಲ್ಲ. ಆ ಬಗ್ಗೆ ನಾನು ಪಹಣಿಯನ್ನು ನೋಡಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಖಂಡಿಕೆ 7 ರಲ್ಲಿ ಬರೆದ ಸಂಗತಿ ಸುಳ್ಳು ಇದೆ ಎಂದರೆ ಸರಿಯಲ್ಲ.

ನಾನು ಮತ್ತು DW-2 ಹಾಗೂ DW-4 ರಿಂದ DW-7 ರವರು ಕೂಡಿಕೊಂಡು 5 ನೇ ಪ್ರತಿವಾದಿಗೇ ಲಾಭ ಮಾಡುವ ಉದ್ದೇಶದಿಂದ ಸಂಚು ಮಾಡಿರುತ್ತೆವೆ ಎಂದರೆ ಸರಿಯಲ್ಲ. ನಾವು ವಾದಿ ಪರವಾಗಿ ಪಂಚಾಯಿತಿ ಮಾಡಲು ಹಣ ಬೇಡಿರುತ್ತೆವೆ ಎಂದರೆ ಸರಿಯಲ್ಲ. ವಾದಿ ನಮಗೆ ಹಣ ಕೊಡದೇ ಇರುವ ಕಾರಣ ಹಾಗೂ 5 ನೇ ಪ್ರತಿವಾದಿ ನಮಗೆ ಹಣ ಕೊಟ್ಟಿರುವ ಕಾರಣ ಅವಳ ಪರವಾಗಿ ನಾವೆಲ್ಲರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆವೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದೆನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಆಳಂದ**